**ಸಾಕ್ಷಿಯನ್ನು ದಿಃ 21.07.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ

ಸಾಕ್ಷಿಗೆ ಕನ್ನಡ ಭಾಷೆ ಬರದಿರುವ ಕಾರಣ ಕೇವಲ ತೆಲುಗು ಭಾಷೆ ಬರುವ ಕಾರಣ ಶ್ರೀ. ಎಂ ವಿ ಆರ್ ವಕೀಲರನ್ನು ತೆಲುಗು ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸುವ ಸಲುವಾಗಿ ನೇಮಿಸಲಾಯಿತು.

ನನ್ನ ಮುಖ್ಯ ವಿಚಾರಣೆಗೆ ಮಾಹಿತಿಯನ್ನು ಮಾಹಿತಿ ಗೊತ್ತಿದ್ದ ನನ್ನ ಚಿಕ್ಕಪ್ಪ ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಅಪಘಾತವು ಬಾಟವಾಡಿ ಪಲ್ಲಿ ಹತ್ತಿರ ಆಗಿರುತ್ತದೆ. ಅಪಘಾತವು ದಿಃ07.10.2025 ರಂದು ಆಗಿರುತ್ತದೆ. ಅಪಘಾತದ ಕುರಿತು ದೂರನ್ನು ನನ್ನ ದೊಡ್ಡಣ್ಣ ಗುರುವಾರೆಡ್ಡಿ ನೀಡಿರುತ್ತಾರೆ. ನನ್ನ ದೊಡ್ಡಣ್ಣ ಅಪಘಾತವಾದ ಸ್ಥಳದಲ್ಲಿ ಇರಲಿಲ್ಲ. ನನ್ನ ಅಣ್ಣ ಅಪಘಾತವಾದ ಸ್ಥಳದಲ್ಲಿ ಇಲ್ಲದೇ ಇರುವ ಕಾರಣ ಅಪಘಾತ ಹೇಗೆ ಆಯಿತು ಎಂದು ಅವರಿಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಸದರಿ ಅಪಘಾತ ನೋಡಿದವರು ಅವರಿಗೆ ಮಾಹಿತಿ ನೀಡಿದ್ದರು ಎಂದು ನುಡಿಯುತ್ತಾರೆ. ಅಪಘಾತವನ್ನು ನನ್ನ ದೊಡ್ಡಣ್ಣ ಪ್ರತ್ಯಕ್ಷ ನೋಡಿಲ್ಲ ಎಂದರೆ ಸಾಕ್ಷಿಯು ಅವರಿಗೆ ಸದರಿ ಅಪಘಾತ ಪ್ರತ್ಯಕ್ಷ ನೋಡಿದವರು ಮಾಹಿತಿ ನೀಡಿದ್ದರು ಎಂದು ನುಡಿಯುತ್ತಾರೆ. ಪ್ರತ್ಯಕ್ಷ ಸಾಕ್ಷಿದಾರರು ಪೋಲೀಸರ ಮುಂದೆ ಹೇಳಿಕೆ ಕೊಟ್ಟ ಕುರಿತು ನನಗೆ ಮಾಹಿತಿ ಇಲ್ಲ ಆದರೆ ಪೋಲೀಸ್ ಠಾಣೆಗೆ ಬಂದು ಅವರು ಹೇಳಿಕೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತ ಯಾವ ರೀತಿ ಆಗಿರುತ್ತದೆ ಎಂದು ತಿಳಿದುಕೊಳ್ಳಲು ನಾನು ದಾಖಲೆಯನ್ನು ಪರಿಶೀಲನೆ ಮಾಡಿ ನೋಡಿರುತ್ತೇನೆ. ನನ್ನ ತಂದೆ ರಸ್ತೆಯ ಎಡಭಾಗದಲ್ಲಿ ತಮ್ಮ ದ್ವಿಚಕ್ರ ವಾಹನ ಚಾಲನೆ ಮಾಡಿಕೊಂಡು ಹೊರಟಿದ್ದರು. ಅಪಘಾತವಾದ ಸ್ಥಳ ತಲಕಡದಿಂದ ಪೀಲೇರಿಗೆ ಹೋಗುವ ರಸ್ತೆಯಾಗಿರುತ್ತದೆ. ನನ್ನ ತಂದೆ ಅ ದಿನ ತಲಕಡದಿಂದ ಪೀಲೇರಿಗೆ ಬರುತ್ತಿದ್ದರು. ಸದರಿ ರಸ್ತೆ ದ್ವಿಪಥ ರಸ್ತೆಯಾಗಿದ್ದು ಸಮಾರು 20 ಅಡಿ ಅಗಲವಿರುತ್ತದೆ. ನನ್ನ ತಂದೆ ಸದರಿ ರಸ್ತೆಯ ಎಡಭಾಗದಲ್ಲಿ ಹೋಗುತ್ತಿರುವಾಗ ಅಪಘಾತ ಪಡಿಸಿದ ವಾಹನ ಹಿಂದಿನಿಂದ ಬಂದು ಡಿಕ್ಕಿ ಪಡಿಸಿತು ಎಂದು ಅಲ್ಲಿ ಇದ್ದ ಜನರು ಮಾಹಿತಿ ನೀಡಿದ್ದರು. ನನ್ನ ತಂದೆಯ ಸ್ವತಃ ತಪ್ಪಿ ನಿಂದ ಮತ್ತು ನಿರ್ಲಕ್ಷ್ಯತನದಿಂದ ಅವರು ತಮ್ಮ ದ್ವಿಚಕ್ರ ವಾಹನದ ಮೇಲೆ ನಿಯಂತ್ರಣ ತಾಳಲಾರದೇ ಇನ್ನೊಂದು ಹಿಂದಿನಿಂದ ಬರುತ್ತಿದ್ದ ವಾಹನದ ಡೋರ್ ತಾಗಿ ಅಪಘಾತ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 4 ರ ಪ್ರಕಾರ ಸದರಿ ಕಾರಿನ ಎಡ ಬದಿಯ ಬಾಗಿಲಿಗೆ ಜಖಂ ಆಗಿರುತ್ತದೆ ಎಂದು

ನಮೂದು ಇದ್ದುದ್ದರಿಂದ ನನ್ನ ತಂದೆಯ ನಿರ್ಲಕ್ಷ್ಯತನದಿಂದಲೇ ಸದರಿ ಅಪಘಾತವಾಗಿದ್ದು ಸದರಿ ಬೊಲೆರೋ ವಾಹನದ ಚಾಲಕನ ತಪ್ಪಿ ನಿಂದ ಸದರಿ ಅಪಘಾತವಾಗಿಲ್ಲ ಎಂದರೆ ಸಾಕ್ಷಿಯು ಸದರಿ ಬೊಲೆರೋ ವಾಹನದ ಚಾಲಕ ಅತೀ ವೇಗದಿಂದ ಬಂದು ಅಪಘಾತ ಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬೊಲೆರೋ ವಾಹನ ಡಿಕ್ಕಿ ಪಡಿಸಿರುತ್ತದೆ ಎಂದು ಹೇಳಿದ್ದು, ಸದರಿ ವಾಹನ ನನ್ನ ತಂದೆಯ ದ್ವಿಚಕ್ರ ವಾಹನದ ಹಿಂಬದಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿತು. ಒಂದು ವೇಳೆ ನನ್ನ ತಂದೆಯ ದ್ವಿಚಕ್ರ ವಾಹನದ ಹಿಂಬದಿಗೆ ಡಿಕ್ಕಿ ಪಡಿಸಿದರೆ, ನನ್ನ ತಂದೆಯ ವಾಹನದ ಹಿಂಬದಿಗೆ ಜಖಂಗೊಡಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಸದರಿ ದ್ವಿಚಕ್ರ ವಾಹನವನ್ನು ಅಪಘಾತವಾದ ಸ್ಥಳದಲ್ಲೇ ಬಿಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಬೊಲೆರೋ ವಾಹನದ ಮುಂಭಾಗಕ್ಕೆ ಜಖಂ ಆಗಿರುತ್ತದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇವೆ. ಆ ರೀತಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಮತ್ತು ನಾವು ಹೇಳುವಂತೆ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಬೊಲೆರೋ ಪಿಕ್ ಅಪ್ ವಾಹನದ ಚಾಲಕನ ನಿರ್ಲಕ್ಷ್ಯತನದಿಂದ ಸದರಿ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನನ್ನ ದೊಡ್ಡಣ್ಣನಿಗೆ ಅಪಘಾತದ ಕುರಿತು ಮಾಹಿತಿ ನೀಡಿದ ವ್ಯಕ್ತಿಗಳನ್ನು ಸಾಕ್ಷಿ ಮಾಡಿಸುತ್ತೇನೆ. ಸದರಿ ಪ್ರತ್ಯಕ್ಷ ಸಾಕ್ಷಿದಾರರನ್ನು ಅಂತಿಮ ವರದಿಯಲ್ಲಿ ಸಾಕ್ಷಿದಾರರು ಎಂದು ತೋರಿಸಿರುತ್ತಾರೆ. ನನ್ನ ತಂದೆ ಧರಿಸಿದ್ದ ಹೆಲ್ಮೆಟ್ ಅನ್ನು ಪೋಲೀಸರು ಜಪ್ತಿ ಪಡಿಸಿಕೊಂಡ ಕುರಿತು ಅಂತಿಮ ವರದಿಯಲ್ಲಿ ನಮೂದು ಮಾಡಿರುವುದಿಲ್ಲ. ನನ್ನ ತಂದೆ ಹೆಲ್ಮೆಟ್ ಧರಿಸಿರಲಿಲ್ಲ ಒಂದು ವೇಳೆ ಧರಿಸಿದ್ದರೆ ಅವರಿಗೆ ಆ ರೀತಿ ಗಾಯಗಳು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತವಾದಾಗ ನನ್ನ ತಂದೆಗೆ 65 ವರ್ಷ ವಯಸ್ಸಾಗಿತ್ತು ಎಂದರೆ ಸಾಕ್ಷಿಯು 64 ಮುಗಿದು 65 ಚಾಲ್ತಿಯಲ್ಲಿತ್ತು ಎಂದು ನುಡಿಯುತ್ತಾರೆ. ನನ್ನ ತಂದೆ ಮುಂಚೆ ಗೋಪಾಲ ಪುರದಲ್ಲಿ ವಾಸವಾಗಿದ್ದು ಅಪಘಾತವಾಗುವ ಸಮಯದಲ್ಲಿ ಅವರು ಬಾಟವಾರ ಪಲ್ಲಿಯಲ್ಲಿ ವಾಸವಾಗಿದ್ದರು. ನನ್ನ ತಂದೆ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಎಲ್ಲರೂ ಒಟ್ಟಿಗೆ ಇದ್ದು ಅವರು ವ್ಯವಸಾಯ ಮಾಡುವುದಕ್ಕಾಗಿ ಅಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿಯ ಹೆಸರು ಸಾವಿತ್ರಿ. ನನ್ನ ತಾಯಿ ಕುವೈಟ್ ನಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಮುಂಚೆ ಇದ್ದರು ಈಗ ನಮ್ಮೊಂದಿಗೆ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ. ಕುವೈತ್ ಗೆ ಸಂಪಾದನೆ ಮಾಡಲು ನನ್ನ ತಾಯಿ ಹೋಗಿದ್ದರು ಎಂದರೆ ಸಾಕ್ಷಿಯು ಮುಂಚೆ ಹೋಗಿದ್ದರು ಎಂದು ನುಡಿಯುತ್ತಾರೆ.

ಅಪಘಾತವಾಗುವ ಒಂದು ವರ್ಷ ಮುಂಚೆ ನನ್ನ ತಾಯಿ ಕುವೈತ್ ನಿಂದ ಮರಳಿ ಬಂದಿದ್ದರು. ನಿಪಿ 2 ದೂರನ್ನು ನನ್ನ ಸಹೋದರ ದಾಖಲಿಸಿದ್ದರು ಎಂದರೆ ಸರಿ. ದೂರಿನಲ್ಲಿ ನನ್ನ ತಾಯಿ ಕುವೈತ್ ನಲ್ಲಿದ್ದು ಮರಳಿ ಅವರು ಭಾರತಕ್ಕೆ ಬಂದು ಆ ನಂತರ ಅವರು ಮತ್ತೆ ಕುವೈತ್ ಗೆ ಹೋಗಿರುತ್ತಾರೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಅಪಘಾತವಾದ ನಂತರ ನನ್ನ ತಾಯಿ ಕುವೈತ್ ನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಜಮೀನನ್ನು ಲೀಸ್ ಮೇಲೆ ತೆಗೆದುಕೊಂಡು ಟಮೋಟೋ ಬೆಳೆ ಬೆಳೆಯುತ್ತಿದ್ದರು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಈ ಪ್ರಕರಣಕ್ಕಾಗಿ ನನ್ನ ತಂದೆ ಲೀಸ್ ಮೇಲೆ ಜಮೀನು ಪಡೆದುಕೊಂಡು ಟಮೋಟೋ ಬೆಳೆ ಬೆಳೆಯುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದು ಅವರಿಗೆ ತಿಂಗಳಿಗೆ 25 ಸಾವಿರ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ.

2. ನನ್ನ ತಂದೆಗೆ ನಾವು 3 ಜನ ಮಕ್ಕಳು. ನನ್ನ ತಂದೆಗೆ ವಯಸ್ಸಾಗಿದ್ದು ಅವರು ಯಾವುದೇ ವ್ಯವಸಾಯ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಅರ್ಜಿದಾರರು ನನ್ನ ತಾಯಿ, 2 ಮತ್ತು 3 ನೇ ಅರ್ಜಿದಾರರು ನನ್ನ ದೊಡ್ಡ ಮತ್ತು ಸಣ್ಣ ಸಹೋದರರು ಎಂದರೆ ಸರಿ. ನನ್ನ ತಾಯಿ ವಾಸವಾಗಿರುವ ಮನೆ ನಂಬರ್ 3/77 ಗೋಪಾಲ ಪುರದಲ್ಲಿ ಇರುತ್ತದೆ. ನನ್ನ ತಂದೆಯ ಆಧಾರ್ ಕಾರ್ಡಿನಲ್ಲಿ ಮನೆ ನಂಬರ್ 1/9 ಅಂತ ಇದ್ದು ಕೆ ದೊಡ್ಡಪಲ್ಲಿ ಗ್ರಾಮದಲ್ಲಿ ಇರುತ್ತದೆ. 2 ನೇ ಅರ್ಜಿದಾರರು ಪೂಜಾರವಾರಪಲ್ಲಿಯಲ್ಲಿ ವಾಸವಾಗಿರುತ್ತಾರೆ. 3 ನೇ ಅರ್ಜಿದಾರರು ಗೋಪಾಲ ಪುರದಲ್ಲಿ ವಾಸವಾಗಿರುತ್ತಾರೆ. 1 ನೇ ಎದುರುದಾರರು ಯಾರ ಮೇಲೂ ಅವರಲಂಭಿತರಾಗಿಲ್ಲ ಅವರಷ್ಟಕ್ಕೆ ಅವರು ಸ್ವತಃ ಜೀವನ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಅರ್ಜಿದಾರರು ನನ್ನ ತಂದೆಯ ಮೇಲೆ ಅವಲಂಭಿತರಾಗಿರಲಿಲ್ಲ ಅವರು ಸ್ವತಃ ಜೀವನ ಸಾಗಿಸುತ್ತಿದ್ದರು ಎಂದರೆ ಸರಿಯಲ್ಲ.

3. ನನ್ನ ಮದುವೆ 2011 ನೇ ಸಾಲಿನಲ್ಲಿ ಆಗಿರುತ್ತದೆ. ನೀವು ನಿಮ್ಮ ಗಂಡನ ಮನೆಯಲ್ಲಿ ವಾಸವಾಗಿದ್ದೀರಿ ಎಂದರೆ ಸಾಕ್ಷಿಯು ನನ್ನ ಗಂಡನೊಂದಿಗೆ ನನ್ನ ತಂದೆಯ ಮನೆಯಲ್ಲಿ ವಾಸವಾಗಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಅಧಾರ್ ಕಾರ್ಡಿನ ಪ್ರಕಾರ ನನ್ನ ಗಂಡನೊಂದಿಗೆ ಕಂಟೆವಾರಪಲ್ಲಿಯಲ್ಲಿ ವಾಸವಾಗಿರುತ್ತೇನೆ ಎಂದರೆ ಸಾಕ್ಷಿಯು ಕರೊನಾಗಿಂತ ಮುಂಚೆ ಅಲ್ಲಿ ವಾಸವಾಗಿದ್ದು ಈಗ ನನ್ನ ತಂದೆಯ ಮನೆಯಲ್ಲಿ ವಾಸವಾಗಿದ್ದೆ ಎಂದು ನುಡಿಯುತ್ತಾರೆ. ಈ

ಪ್ರಕರಣಕ್ಕಾಗಿ ನಾನು ನನ್ನ ತಂದೆಯ ಮನೆಯಲ್ಲಿ ವಾಸವಾಗಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯೊಂದಿಗೆ ವಾಸವಾಗಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಆದರೂ ಸಹಾ ನನ್ನ ತಂದೆಯೊಂದಿಗೆ ವಾಸವಾಗಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗಲೆಂದು ಕೊಟ್ಟಿ ದಾಖಲೆಯನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**(ಓ. ಹೇ. ಕೇ. ಸ. ಇ)**

**(ಈಶ್ವರ್ ಎಸ್ ಎಂ)**
**(22 ನೇ ಎ ಎಸ್ ಸಿ ಜೆ ಮತ್ತು ಎ ಸಿ ಜೆ ಎಂ ನ್ಯಾಯಾಧೀಶರು)**
**(ಬೆಂಗಳೂರು )**